# ಮೂರು ತಲೆಮಾರು ರಂಜಿಸಿದ ರಿಷಿಕಪೂರ್



ಲಕ್ಷಾಂತರ ಯುವಮನಸ್ಸುಗಳನ್ನು ಪ್ರೇಮದ ಸಮ್ಮೋಹಿನಿಯಲ್ಲಿ ಸಿಲುಕಿಸಿದ ಸಿನಿಮಾ 'ಬಾಬ್ಬಿ'

■ ಬಿಂದು

67 ಸಾಯುವ ವಯಸ್ಸಲ್ಲ ಎನ್ನುವವರಿದ್ದಾರೆ. ಆದರೆ ಕ್ಯಾನ್ಸರ್‌ಗೆ ಅದು ಗೊತ್ತಿರಬೇಕೆಂದಿಲ್ಲ. ಹಿರಿಯ ನಟ ರಿಷಿಕಪೂರ್ ಕಳೆದ ವಾರ ಬದುಕಿನಿಂದ ನಿರ್ಗಮಿಸಿದ್ದು ಬಾಲಿವುಡ್‌ನಲ್ಲಿ ಎಲ್ಲರನ್ನೂ ದುಃಖಕ್ಕೀಡುಮಾಡಿದೆ. ಅವರಿಗೆ ಕ್ಯಾನ್ಸರ್ ಆಗಿದೆ ಎನ್ನುವುದು 2018ರಲ್ಲೇ ಗೊತ್ತಾಗಿತ್ತು. ಪತ್ನಿ ನೀತುಸಿಂಗ್ ಜೊತೆಗೆ ಆಗ ನ್ಯೂಯಾರ್ಕ್‌ಗೆ ತೆರಳಿದ್ದ ರಿಷಿ ಕಪೂರ್, ಒಂದು ವರ್ಷ ಅಲ್ಲಿಯೇ ಚಿಕಿತ್ಸೆ ಪಡೆದಿದ್ದರು. ಅಲ್ಲಿಂದ ಮರಳಿದ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದಾಗ ಹುಷಾರಾಗಿದ್ದೀನಿ. ಆರು ತಿಂಗಳಿಗೋ, ವರ್ಷಕ್ಕೋ ಒಮ್ಮೆ ನ್ಯೂಯಾರ್ಕ್‌ಗೆ ಹೋಗಿ ತಪಾಸಣೆ ಮಾಡಿಸಿಕೊಂಡು ಬರಬೇಕಿದೆ ಅಷ್ಟೆ ಎಂದಿದ್ದರು. ಹುಷಾರಾಗಿದ್ದಕ್ಕೆ ಸಾಕ್ಷಿ ಎಂಬಂತೆ ದೆಹಲಿಯಲ್ಲಿ, ಜನವರಿಯಲ್ಲಿ 'ಶರ್ಮಾಜಿ ನಮ್ಕೀನ್' ಎಂಬ ಸಿನಿಮಾದ ಶೂಟಿಂಗ್‌ನಲ್ಲೂ ಬ್ಯುಸಿ ಆಗಿದ್ದರು. 18 ದಿನಗಳ ಶೂಟಿಂಗ್ ಬಳಿಕ ಜ್ವರ ಬಂದು ಆಸ್ಪತ್ರೆಗೆ ಸೇರಿ, ಅಲ್ಲಿಂದ ಮುಂಬೈ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿತ್ತು.

ರಿಷಿಕಪೂರ್ ವೃತ್ತಿ ಜೀವನದ ಗ್ರಾಫ್ ಒಂದೇ ಸಮ ಇರಲಿಲ್ಲ. ಕಾಲಕಾಲಕ್ಕೆ ಏರಿಳಿತಗಳನ್ನು ಎದುರಿಸುತ್ತಲೇ ಮೂರು ತಲೆಮಾರುಗಳನ್ನು ರಂಜಿಸಿದ ಖ್ಯಾತಿ ಈತನದ್ದು. ಹಿಂದಿ ಚಿತ್ರರಂಗದ ಮೊತ್ತಮೊದಲ ಶೋಮ್ಯಾನ್ ರಾಜ್‌ಕಪೂರ್‌ರ ಎರಡನೇ ಮಗ ರಿಷಿ. ತಾಯಿ ಕೃಷ್ಣಾ ಮಲ್ಹೋತ್ರಾ. ರಾಜ್‌ಕಪೂರ್ ಅವರ ಸೂಪರ್‌ಹಿಟ್ ಸಿನಿಮಾ 'ಮೇರಾ ನಾಮ್ ಜೋಕರ್'ನಲ್ಲೂ ಈತ ಬಣ್ಣ ಹಚ್ಚಿದ್ದು ಈಗ ಅಷ್ಟಾಗಿ ನೆನಪಿಲ್ಲದ ಸಂಗತಿ.

ಹಾಗೆ ನೋಡಿದರೆ ರಿಷಿಯ 70ರ ದಶಕದ ಬಾಬ್ಬಿ ಜಮಾನದ ಖದರೇ ಬೇರೆ. ಲಕ್ಷಾಂತರ ಯುವಮನಸ್ಸುಗಳನ್ನು ಪ್ರೇಮದ ಸಮ್ಮೋಹಿನಿಯಲ್ಲಿ ಸಿಲುಕಿಸಿದ ಸಿನಿಮಾ ಅದು. 18ರ ಹರೆಯದ ಶ್ರೀಮಂತ ಹಿಂದೂ ಯುವಕ 16ರ ಹರೆಯದ ಕ್ರಿಶ್ಚಿಯನ್ ಹುಡುಗಿ ಬಾಬ್ಬಿಯನ್ನು ಪ್ರೀತಿಸಿ ಹೆತ್ತವರ ವಿರೋಧದ ಮಧ್ಯೆ ಮದುವೆಯಾಗುವ ಕಥೆ. ಆ ಕಾಲದಲ್ಲಿ ಡಿಂಪಲ್ ಕಪಾಡಿಯಾ ಈಜುಡುಗೆಯಲ್ಲಿ ಮಿಂಚಿದ್ದು ದೊಡ್ಡ ಸುದ್ದಿ. 1973ರಲ್ಲಿ ತೆರೆಗೆ ಬಂದ ಈ ಸಿನಿಮಾವನ್ನು ಸ್ವತಃ ರಾಜ್‌ಕಪೂರ್ ನಿರ್ದೇಶಿಸಿದ್ದರು. ಲಕ್ಷ್ಮೀಕಾಂತ್ ಪ್ಯಾರೇಲಾಲ್ ಜೋಡಿಯ ಹಿನ್ನೆಲೆ ಸಂಗೀತ ಮತ್ತು ಹಾಡುಗಳು ಆಗಲೇ ದಾಖಲೆ ನಿರ್ಮಿಸಿದ್ದವು.

1977ರಲ್ಲಿ ಬಿಡುಗಡೆ ಕಂಡ ಅಮರ್ 'ಅಕ್ಬರ್ ಅಂತೋನಿ' ಸಿನಿಮಾದಲ್ಲಿ ಅಮಿತಾಭ್, ವಿನೋದ್ ಖನ್ನಾ ಮತ್ತು ರಿಷಿ ತ್ರಿಮೂರ್ತಿಗಳ ಜೋಡಿ ಮಲ್ಟಿಸ್ಟಾರರ್ ಸಿನಿಮಾಗಳ ಯುಗಕ್ಕೆ ಹೊಸ



ರಂಗು ತುಂಬಿತ್ತು. ನಟಿಯರಾದ ಶಬಾನಾ ಆಜ್ಮಿ, ನೀತು ಸಿಂಗ್ ಮತ್ತು ಪರ್ವೀನ್ ಬಾಬಿ ಕೂಡಾ ಇದ್ದು ಬಾಲಿವುಡ್‌ನಲ್ಲೇ ಭಾರೀ ತಾರಾಗಣದ ಚಿತ್ರವೆಂದು ಈಗಲೂ ಹೆಸರಾಗಿದೆ. ಅದೇ ದಾರಿಯಲ್ಲಿ 1981ರಲ್ಲಿ ಬಂದ ಇನ್ನೊಂದು ತ್ರೀಸ್ಟಾರರ್ ಸಿನಿಮಾ 'ನಸೀಬ್'. ಅದರಲ್ಲಿ ಅಮಿತಾಭ್ ಬಚ್ಚನ್, ಶತ್ರುಘ್ನ ಸಿನ್ಹಾ ಮತ್ತು ರಿಷಿ ಕಪೂರ್ ಜೋಡಿ. ಆ ಕಾಲದಲ್ಲಿ 4 ಕೋಟಿ ರೂಪಾಯಿ ಬಜೆಟ್ ಹೊಂದಿದ್ದ ನಸೀಬ್, 14.5 ಕೋಟಿ ರೂಪಾಯಿಗಳನ್ನು ಬಾಕ್ಸಾಫೀಸ್‌ನಲ್ಲಿ ದೋಚಿದ್ದು ಬಾಲಿವುಡ್‌ನ ದಾಖಲೆಯೂ ಹೌದು.

ಎಂಟು ವರ್ಷಗಳ ಬಳಿಕ ರಿಷಿಕಪೂರ್ ಇನ್ನೊಮ್ಮೆ ಭರ್ಜರಿ ಸುದ್ದಿ ಮಾಡಿದ್ದು ಚಾಂದ್‌ನಿ ಮೂಲಕ. ಶ್ರೀದೇವಿ ಮತ್ತು ರಿಷಿ ಜೋಡಿ ಈ ಚಿತ್ರದಲ್ಲಿ ಹೊಸ ಸೆನ್ಸೇಷನ್ ನಿರ್ಮಿಸಿದ್ದು ಸುಳ್ಳಲ್ಲ. ಇದರ ಹಾಡುಗಳು ಈಗಲೂ ಜನಪ್ರಿಯ. ರಿಷಿ ಹೀರೊ ಆಗಿ ನಟಿಸಿದ ಹಲವು ಚಿತ್ರಗಳು ಆತನಿಗಿಂತ ಹೆಚ್ಚಾಗಿ ಆತನ ಹೀರೋಯಿನ್‌ಗಳಿಗೆ ಪ್ರಚಾರ ನೀಡಿದ್ದೂ ಉಂಟು. ಅವುಗಳಲ್ಲಿ ಚಾಂದ್‌ನಿಯೂ ಒಂದು. ಜಯಪ್ರದಾ ಜೊತೆಗೆ ನಟಿಸಿದ ಸರ್ಗಮ್ ಇನ್ನೊಂದು. ಕರ್ಜ್, ಪ್ರೇಮಗ್ರಂಥ್, ಸಾಗರ್, ನಗೀನಾ, ಪ್ರೇಮರೋಗ್, ಬೋಲ್ ರಾಧ ಬೋಲ್ ಹೀಗೆ ರಿಷಿ ಚಿತ್ರಗಳು ಯಶಸ್ಸಿನ ಪಟ್ಟಿ ದೊಡ್ಡದಿದೆ. ಹೊಸ ತಲೆಮಾರಿನ ನಟರ ಜೊತೆಗೆ ನಟಿಸಿದ ದಾಮಿನಿ, ಮುಲ್ಕ್, ಕಪೂರ್ ಅಂಡ್ ಸನ್ಸ್ ಮುಂತಾದ ಚಿತ್ರಗಳು ರಿಷಿಕಪೂರ್‌ಗೆ ಅಭಿನಯವೇ ಮುಖ್ಯವಾದ ಹೊಸ ಇಮೇಜನ್ನು ನೀಡಿದ್ದೂ ಸುಳ್ಳಲ್ಲ. ಬಾಲಿವುಡ್‌ನಲ್ಲಿ ತನ್ನದೇ ಆದ ಸ್ಥಾನವೊಂದನ್ನು ನಿರ್ಮಿಸಿ ರಿಷಿ ನಿರ್ಗಮಿಸಿದ್ದಾರೆ. ■